ದಿ.04.10.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಪಾಟೀಸವಾಲು : ಶ್ರೀ ಟಿ.ಹೆಚ್.ಎಸ್. ವಕೀಲರಿಂದ 2 ನೇ ಎದುರುದಾರರ ಪರವಾಗಿ :**

13. ಕೆಪಿಟಿಸಿಎಲ್ ಗೆ ನಾನು ಖಾಯಂ ನೌಕರನಲ್ಲ ಎಂದರೆ ಸರಿ. ನಾನು ಅಲ್ಲಿ ಗುತ್ತಿಗೆ ಆಧಾರದ ಮೇಲೆ ಪಾಳಿ ಸಹಾಯಕನಾಗಿ ಕೆಲಸಕ್ಕೆ ಸೇರಿದ್ದೆ ಎಂದರೆ ಸರಿ. ನಾನು ಕೆಲಸಕ್ಕೆ ಸೇರಿಕೊಂಡಾಗ ಗುತ್ತಿಗೆದಾರರಾಗಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ರಾಮಚಂದ್ರ ಎನ್ನುವವರು ಗುತ್ತಿಗೆದಾರರಾಗಿ ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ವಿಚಾರ ನಾನು ಕೆಲಸಕ್ಕೆ ಸೇರಿ 3 ವರ್ಷ ಆದ ನಂತರ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಗುತ್ತಿಗೆ ಇರುವುದು 1 ವರ್ಷ ಅವಧಿ ಎಂದರೆ ನನಗೆ ಗೊತ್ತಿಲ್ಲ.

14. ಗುತ್ತಿಗೆದಾರರ ಅಡಿಯಲ್ಲಿ ನಾವು ಕೆಲಸಕ್ಕೆ ಸೇರಿಕೊಂಡಿದ್ದಲ್ಲಿ 1 ವರ್ಷದ ಅವಧಿ ಯಾದ್ದರಿಂದ ಪಾಳಿ ಬದಲಾವಣೆಯಾಗುತ್ತಿರುತ್ತದೆ ಎಂದರೆ ಸಾಕ್ಷಿಯು ತನ್ನನ್ನು ಯಾವಾಗಲೂ ಬದಲಾವಣೆ ಮಾಡಿಲ್ಲ ಎಂದು ಹೇಳುತ್ತಾರೆ. ನಾನು ಕೆಲಸಕ್ಕೆ ಸೇರಿಕೊಳ್ಳಬೇಕಾದರೆ ಕೆಪಿಟಿಸಿಎಲ್ ನ ನಿಯಾಮವಳಿ ಪ್ರಕಾರ ಇರುವ ಷರತ್ತುಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

15. ಕೆಪಿಟಿಸಿಎಲ್ ನ ನಿಯಾಮವಳಿ ಪ್ರಕಾರ ಪಾಳಿ ನೌಕರನಾಗಿ ಕೆಲಸ ಮಾಡುತ್ತಿದ್ದ ಸ್ಥಾನಕ್ಕೆ ಖಾಯಂ ನೌಕರ ಬಂದಲ್ಲಿ ಸದರಿ ಪಾಳಿ ನೌಕರನ ಸ್ಥಾನ ರದ್ದಾಗುತ್ತದೆ ಎಂದರೆ ಸರಿ. 2 ನೇ ಎದುರುದಾರರಡಿಯಲ್ಲಿ ನಾನು ಪಾಳಿ ನೌಕರನಾಗಿ 1 ತಿಂಗಳು ಸೇವೆ ಸಲ್ಲಿಸಿದ್ದೇನೆ. ನನಗೂ 2 ನೇ ಎದುರುದಾರರಿಗೂ ಯಾವುದೇ ಅಗ್ರಿಮೆಂಟ್ ಇರಲಿಲ್ಲ. 2 ನೇ ಎದುರುದಾರರ ಬಳಿ ನಾನು 1 ತಿಂಗಳ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಯಾವುದೇ ಹಾಜರಾತಿ ಸಹಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಇಲಾಖಾ ಲೆಡ್ಜರ್ ನಲ್ಲಿ ಸಹಿ ಮಾಡಿದ್ದೇನೆಂದು ಹೇಳುತ್ತಾರೆ.

16. 2 ನೇ ಎದುರುದಾರರ ಬಳಿ 1 ತಿಂಗಳ ಕೆಲಸ ನಿರ್ವಹಿಸಿದ ಸಂದರ್ಭದಲ್ಲಿ ಪಿಎಫ್ ಆಗಲೀ ಇಎಸ್ಐ ಆಗಲೀ ನಾನು ಕಟ್ಟಿರುವುದಿಲ್ಲ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಸಹ ಹಾಜರುಪಡಿಸಿರುವುದಿಲ್ಲ. 2 ನೇ ಎದುರುದಾರರ ವಿರುದ್ಧ ನಾನು ಕಾರ್ಮಿಕ ನ್ಯಾಯಾಲಯದಲ್ಲಿ ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿ. ಕಾರ್ಮಿಕ ನ್ಯಾಯಾಲಯದಲ್ಲಿ ಏನು ಆದೇಶ ಆಗಿತ್ತು ಎಂದು ನನಗೆ ಗೊತ್ತಿದೆ. ಕಾರ್ಮಿಕ ನ್ಯಾಯಾಲಯದಿಂದ ನಾನು 2 ನೇ ಎದುರುದಾರರ ಅಡಿಯಲ್ಲಿ ಕೆಲಸಕ್ಕೆ ಸೇರಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸರಿ.

17. ನನಗೆ ನಮ್ಮೂರಿನಲ್ಲಿ ಜಮೀನು ಇದೆ ಎಂದರೆ ಸರಿಯಲ್ಲ. ನನ್ನ ಪತ್ನಿ ಹೈಸ್ಕೂರ್ ಟೀಚರ್ ಎಂದರೆ ಸರಿ. ನನ್ನ ಪತ್ನಿ ವಿಚ್ಛೇದನಕ್ಕಾಗಿ ಅರ್ಜಿ ಹಾಕಿರುತ್ತಾರೆಂದು ಸಾಕ್ಷಿಯು ಸ್ವತಃ ನುಡಿದಿದ್ದಾರೆ. 2 ನೇ ಎದುರುದಾರರ ಅಡಿ ನಾನು ಪಾಳಿ ಕೆಲಸಗಾರರಾಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ.

18. ಈ ಕೇಸಿನಲ್ಲಿ ನಾನು ಬರೆಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.